ತನ್ನ ಲಕ್ಕಿ ಡ್ರೆಸ್ ಎಂದು ಹೇಳಿ ನಕ್ಕುಬಿಡುತ್ತಿದ್ದದ್ದು, ನನ್ನನ್ನು ಮನೆಗೆ ಕರೆದುಕೊಂಡು ಹೋಗುವಾಗ ಮೂರು ಕಿ.ಮೀ ನಡೆಸಿಕೊಂಡೇ ಹೋಗಿದ್ದು, ಅಡುಗೆಮನೆ ಕಿಟಕಿಯ ಕಮಲದ ಪಕಳೆಯ ಮಾಲೆ, ಒಂದೊಂದಾಕಾರದಲ್ಲಿದ್ದ ಅಡುಗೆಮನೆಯ ಡಬ್ಬಿಗಳು, ಭುಜ ಚೆಲ್ಲಿಕೊಂಡು ನೆತ್ತಿ ನೇತುಹಾಕಿಸಿಕೊಂಡ ಹೆಣಿಕೆ ಚೀಲ, ಅಡುಗೆಮನೆ ಮರೆಮಾಡಲು ಇಳಿಬಿಟ್ಟಿದ್ದ ಮಂಜರಪಾಟ್, ಹಸಿರುನೀಲಿ ಪಟಾಪಟಿ ಬಟ್ಟೆಯಿಂದ ಹೊಲಿದ ತಲೆದಿಂಬು ಕವರುಗಳು, ಕಾಲೊರೆಸಲು ಹಾಕಿದ್ದ ಪುರಾತನ ಗೋಣಿತಾಟು, ಹಿಂಬಡಗಳಿಂದ ಜೀರ್ಣಗೊಂಡ ಜಾಗದಲ್ಲಿ ಶ್ರೀಲಂಕಾ, ಗೋವಾ ನಕಾಶೆ ಮೂಡಿಸಿಕೊಂಡಿದ್ದ ಹವಾಯಿ ಚಪ್ಪಲಿಗಳು, ಬಿಸಿಲಿಗೆ ಒಣಹಾಕಿಸಿಕೊಂಡಿದ್ದ ನಾಲ್ಕೈದು ಮೆಣಸಿನಕಾಯಿ ನಾಲ್ಕೈದು ಬೋಟು ಹುಣಸೆ ಕಾಯಿಗಳು, ಸಬಕಾರಪುಡಿಯ ದಪ್ಪ ಚೀಲದಲ್ಲಿ ಮೆತ್ತಗೆ ಹುದುಗಿ ಬಿರುಸಿನಿಂದ ಟಿಸಿಲೊಡೆದು ಆಕಾಶದೆಡೆ ಮುಖಚಾಚಿದ್ದ ತುಳಸಿ ಹೀಗೆ ಎಲ್ಲವುಗಳ ಹಿಂದಿನ ಮರ್ಮ ನಿಧಾನ ಹೊಳೆಯಿತಾದರೂ ಆ ಮನೆಯಲ್ಲಿ ಯಾಕೆ ಮೂರು ಜನರಿಲ್ಲ ಎನ್ನುವುದೇ ಪ್ರಶ್ನೆಯಾಗಿ ರಾತ್ರಿ ಎಷ್ಟೋ ಹೊತ್ತು ಕಣ್ಣಿಗೆ ಕಣ್ಣು ಹತ್ತಲಿಲ್ಲ.

ಹೇಗೆ ಕೇಳುವುದು? ಆ ಮೂರನೇ ವ್ಯಕ್ತಿ ಊರಿಗೆ ಹೋಗಿದ್ದರೆ, ಬೇರೆ ಊರಲ್ಲಿ ಕೆಲಸ ಮಾಡುತ್ತಿದ್ದರೆ? ಬಿಟ್ಟು ಹೋಗಿದ್ದರೆ ಅಥವಾ ಸತ್ತೇ ಹೋಗಿದ್ದರೆ? ಛೆ, ಏನು ಕೇಳಿದರೂ ಆಕೆಗೆ ನೋವಾಗಬಾರದು. ಆದರೂ ಆ ಅಮ್ಮ ಮಗಳು ವಯಸ್ಸಿಗೆ, ಸಂಬಂಧಗಳಿಗೆ ಬೇಲಿ ಹಾಕಿಕೊಳ್ಳದೆ ಆ ಪುಟ್ಟಮನೆಯಲ್ಲಿ ಅದೆಷ್ಟು ನಿರಾತಂಕವಾಗಿ ಉಸಿರಾಡುತ್ತಿದ್ದರು? ಪಕ್ಕದ ಮನೆಯವರಿಗೆ ಕೇಳೀತೆಂಬ ಅಳುಕಿಲ್ಲದೆ ಬೈದಾಡಿಕೊಳ್ಳುವ ಮಜಮಜಾ ಬೈಗುಳಗಳು, ಸಿನಿಮಾದ ಪಾತ್ರಗಳೇ ತಾವಾಗಿ ಲಂಗುಲಗಾಮಿಲ್ಲದೆ ಹೇಳಿಕೊಳ್ಳುವ ಡೈಲಾಗುಗಳು, ಭಯಂಕರ ಏಕಪಾತ್ರಾಭಿನಯಗಳು, ಸ್ಪಷ್ಟ ವೇಷಗಳು, ಲಯಬದ್ಧ ಏರಿಳಿತಗಳು ಕೊನೆಯಲ್ಲಿ ನನ್ನೆದುರೇ ಆಕೆ ಅವರಮ್ಮನ ತೊಡೆಯ ಮೇಲೆ ಅವುಚಿಕೊಂಡು ಮಲಗಿ ಇವಳೇ ನನ್ನ ಸರ್ವಸ್ವ ಎಂದು ಹೆಸರಿಡಿದು ಕರೆದು ಕೆನ್ನೆ ಹಿಂಡಾಡಿದ್ದು. ಅಕಸ್ಮಾತ್ ಮೂರನೇ ವ್ಯಕ್ತಿ ಏನಾದರೂ ಇದ್ದಿದ್ದರೆ...

ಮಧ್ಯರಾತ್ರಿ ನಿದ್ರೆ ಹತ್ತಿದ್ದರಿಂದ ಬೆಳಗಾದರೂ ಹಾಸಿಗೆಯಲ್ಲೇ ಇದ್ದೆ. ಆರೂವರೆಗೇ ಫೋನ್ ರಿಂಗ್. ಕನಸಿನಲ್ಲಿರಬೇಕು ಎಂದುಕೊಂಡರೆ ನಿಜವಾಗಿಯೂ ರಿಂಗ್ ಆಗುತ್ತಿತ್ತು. ಅಪ್ಪ ಅಮ್ಮ ಆಫೀಸಿಗೆ ಹೊರಡುವ ಗಡಿಬಿಡಿಯಲ್ಲಿದ್ದರು. ನಾನೇ ಹಲೋ ಅಂದೆ. ಫ್ಯಾಕ್ಟರಿಯ ಕೆಲಸದ ಮೇಲೆ ತಾನು ಎರಡು ದಿನಗಳ ಮಟ್ಟಿಗೆ ಬೆಳಗಾವಿಗೆ ಹೋಗಬೇಕಿದ್ದು, ಶಾಕಾಂಬರಿ ಒಬ್ಬಳೇ ಆಗುತ್ತಾಳಾದ್ದರಿಂದ ಒಂದು ರಾತ್ರಿ ತಮ್ಮ ಮನೆಯಲ್ಲಿ ಮಲಗಲು ಬರಬೇಕೆಂದರು ಅವಳ ಅಮ್ಮ. ನಾನೊಬ್ಬಳೇ ಅವಳ ಮನೆಗೆ! ಚೂರು ಅಳುಕಿದೆ. ಆದರೂ ಮನೆಯಲ್ಲಿ ಕೇಳಿ ಹೇಳುತ್ತೇನೆ ಎಂದು ಫೋನಿಟ್ಟೆ. ಯಾರು ಏನು ಎಂದು ವಿಚಾರಿಸಿದ ಅಪ್ಪ, ಅವಳಿಗೇ ನಮ್ಮನೆಗೆ ಬಂದಿರಲು ಹೇಳು ಅದರಲ್ಲೇನು? ಅಂದರು. ಅವರ ಓನರ್ ಮನೆಗೆ ಫೋನ್ ಮಾಡಿದೆ. ಶಾಕಾಂಬರಿಯ ಅಮ್ಮ, 'ಇಲ್ಲವಾ ಈ ತನಕಾ ಅಕಿಗೆ ಯಾರ ಮನೀಗೂ ಹೋಗಿ ರೂಢಿ ಇಲ್ಲ. ನೀನ ಬಂದ್ಬಿಡು, ಪ್ಲೀಸ್. ಹೆಂಗೂ ನೀ ಅಕಿಗೆ ಕ್ಲೋಸ್. ನಿಮ್ ಅಮ್ಮಾಗ ಫೋನ್ ಕೊಡು, ಹೇಳ್ತೇನಿ ಬೇಕಿದ್ರ' ಅಂದರು. ರಿಸೀವರ್‌ನೊಳಗಿಂದ ಹೊರಬಂದ 'ಕ್ಲೋಸ್' ಗುಂಗಿಹುಳದಂತೆ ಎಷ್ಟೋ ಹೊತ್ತು ಗುಂಯ್ಗುಟ್ಟಿತು. ನನಗೂ ಹಾಗನ್ನಿಸದೆ ಆ ಶಬ್ದವನ್ನಾದರೂ ಹೇಗೆ ಸ್ವೀಕರಿಸುವುದು ಅನ್ನಿಸಿ ಮನಸ್ಸು ದೊರಗುದೊರಗಾಯಿತು.

ಸ್ವಲ್ಪ ಹೊತ್ತಿಗೆ ಶಾಕಾಂಬರಿ ಫೋನ್ ಮಾಡಿ, ನಾವು ರಾತ್ರಿಯೆಲ್ಲಾ ಸಿನಿಮಾ ನೋಡೋಣ, ಇಸ್ಪೀಟ್ ಆಡೋಣ, ಡ್ಯಾನ್ಸ್ ಮಾಡೋಣ, ಟೆರೇಸಿನ ಮೇಲೆ ಬೆಳದಿಂಗಳೂಟ ಮಾಡೋಣ ಹೀಗೆ ಏನೇನೋ ಹೇಳಿ ಪುಸಲಾಯಿಸಿದಳು. ಕೊನೆಗೆ ರೇಷನ್ ಅಕ್ಕಿಯ ಅನ್ನ ಮಾಡುವೆ ಪ್ಲೀಸ್ ಬರಲೇಬೇಕೆಂದು ನಕ್ಕಳು. ಇದೊಂದು ಸಲ ಬಂದುಬಿಡು ಇನ್ನೆಂದೂ ನಿನಗೆ ನಾನು ಕಾಡುವುದಿಲ್ಲ,